# ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1011

ಸದಸ್ಯರ ಹೆಸರು : ಶ್ರೀ ನಿರಾಣಿ ಹಣಮಂತ ರುದ್ರಪ್ಪ

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 18.12.2024.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಒಟ್ಟು ಸಂಚಾರ ಮಾಡುವ ಬಸ್ಸುಗಳ ಸಂಖ್ಯೆ ಎಷ್ಟು; ನೂತನವಾಗಿ ಎಷ್ಟು ಬಸ್ಸುಗಳು ಓಡಾಡುತ್ತಿವೆ; ದುರಸ್ಥಿಯಲ್ಲಿರುವ ಬಸ್ಸುಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು) | ವಿಜಯಪುರ ವಿಭಾಗದಲ್ಲಿ ಒಟ್ಟು 813 ಬಸ್ಸುಗಳಿದ್ದು, ಅವುಗಳಲ್ಲಿ 15 ಬಸ್ಸುಗಳು ದುರಸ್ಥಿಯಲ್ಲಿರುತ್ತವೆ. ಸದರಿ ವಿಭಾಗಕ್ಕೆ ನೂತನವಾಗಿ 127 ಹೊಸ ಬಸ್ಸು ಒದಗಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ. ತಾಲ್ಲೂಕುವಾರು ಬಸ್ಸುಗಳ ವಿವರಗಳು **<u>ಅನುಬಂಧ "ಅ"</u>** ದಲ್ಲಿ ನೀಡಲಾಗಿದೆ.<br><br>ಬಾಗಲಕೋಟೆ ಜಿಲ್ಲೆಯಲ್ಲಿ ಒಟ್ಟು 730 ಬಸ್ಸುಗಳಿದ್ದು, ಅವುಗಳಲ್ಲಿ 08 ದುರಸ್ತಿಯಲ್ಲಿರುತ್ತವೆ. ಸದರಿ ವಿಭಾಗದಲ್ಲಿ ನೂತನವಾಗಿ 88 ಹೊಸ ಬಸ್ಸು ಒದಗಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ. ತಾಲ್ಲೂಕುವಾರು ಬಸ್ಸುಗಳ ವಿವರಗಳು **<u>ಅನುಬಂಧ "ಆ"</u>** ದಲ್ಲಿ ನೀಡಲಾಗಿದೆ. |
| ಆ) | ಈ ಜಿಲ್ಲೆಗಳಲ್ಲಿ ತಾಲ್ಲೂಕಿನಿಂದ ಹಳ್ಳಿಗಳ ಮಾರ್ಗದ ಸಂಚಾರಕ್ಕೆ ಹಳೆಯ ಬಸ್‌ಗಳನ್ನು ನೀಡಲು ಕಾರಣಗಳೇನು; ಹೊಸ ಬಸ್ ನೀಡಲು ಇರುವ ಅಡಚಣೆಗಳೇನು; (ಸೂಕ್ತ ಕಾರಣದೊಂದಿಗೆ ವಿವರಿಸುವುದು) | ವಾ.ಕ.ರ.ಸಾ.ಸಂಸ್ಥೆ ಮತ್ತು ಕ.ಕ.ರ.ಸಾ.ನಿಗಮಗಳಲ್ಲಿ 2023-24ರ ಪೂರ್ವದ 04 ವರ್ಷಗಳಲ್ಲಿ ಹೊಸ ಬಸ್ಸುಗಳನ್ನು ಖರೀದಿಸಿರಲಿಲ್ಲ ಹಾಗೂ ಸಿಬ್ಬಂದಿ ನೇಮಕಾತಿ ಮಾಡಿರಲಿಲ್ಲ. ಇದರಿಂದ ಪ್ರಯಾಣಿಕರಿಗೆ ಬಸ್ಸುಗಳನ್ನು ಒದಗಿಸಲು ತೊಂದರೆಯಾಗಿತ್ತು.<br><br>ಆದರೆ, ಪ್ರಸ್ತುತ 2023-24 ಹಾಗೂ 2024-25ನೇ ಸಾಲಿನಲ್ಲಿ ವಾ.ಕ.ರ.ಸಾ.ಸಂಸ್ಥೆ ಮತ್ತು ಕ.ಕ.ರ.ಸಾ.ನಿಗಮಗಳಲ್ಲಿ ಖರೀದಿಸಲಾದ/ಖರೀದಿಸಲಾಗುವ ಬಸ್‌ಗಳ ವಿವರ ಕೆಳಗಿನಂತಿರುತ್ತದೆ:<br><br>ಸಂಸ್ಥೆ / ಸೇರ್ಪಡೆಯಾದ ಬಸ್‌ಗಳ ಸಂಖ್ಯೆ / ಸೇರ್ಪಡೆಗೊಳಿಸ-ಲಾಗುತ್ತಿರುವ ಬಸ್‌ಗಳ ಸಂಖ್ಯೆ<br>ವಾ.ಕ.ರ.ಸಾ.ಸಂಸ್ಥೆ / 662 / 554<br>ಕ.ಕ.ರ.ಸಾ.ನಿಗಮ / 1014 / 73<br>**ಒಟ್ಟು** / **1676** / **627**<br><br>ಮೇಲ್ಕಂಡಂತೆ ಬಸ್ ಸೇರ್ಪಡೆ ನಂತರ ಬಾಗಲಕೋಟೆ ಜಿಲ್ಲೆಗೆ 127 ಹಾಗೂ ವಿಜಯಪುರ ಜಿಲ್ಲೆಗೆ 88 ಹೊಸ ಬಸ್ಸುಗಳನ್ನು ಒದಗಿಸಲಾಗಿದೆ. |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಇ)</td><td>ಹಬ್ಬದ ಸಂದರ್ಭದಲ್ಲಿ ಹೆಚ್ಚುವರಿಯಾಗಿ ರಾಜಹಂಸ, ಕಲ್ಯಾಣ ರಥ, ಐರಾವತ ಹಾಗೂ ಇತರೆ ಸರ್ಕಾರಿ ಸ್ಲೀಪರ್ ಬಸ್‌ಗಳು ಸಂಚರಿಸುತ್ತಿವೆಯೇ; ಸಂಚರಿಸಿದಲ್ಲಿ ಯಾವ ಯಾವ ಹಬ್ಬಗಳಿಗೆ ಎಷ್ಟು ಬಸ್‌ಗಳನ್ನು ನೀಡಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)</td><td>ಹಬ್ಬದ ಸಂದರ್ಭದಲ್ಲಿ ಹೆಚ್ಚುವರಿಯಾಗಿ ಕೆಳಕಂಡಂತೆ ಕಾರ್ಯಾಚರಿಸಲಾಗಿದೆ.
<table>
<tr><th>ಸಂಸ್ಥೆ</th><th>ಹಬ್ಬ</th><th>ಪ್ರತಿಷ್ಠಿತ</th><th>ವೇಗದೂತ</th><th>ಒಟ್ಟು</th></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>ದಸರಾ</td><td>37</td><td>268</td><td>305</td></tr>
<tr><td></td><td>ದೀಪಾವಳಿ</td><td>112</td><td>620</td><td>732</td></tr>
<tr><td></td><td>ಗೌರಿ ಗಣೇಶ</td><td>75</td><td>215</td><td>290</td></tr>
<tr><td colspan="2">ಒಟ್ಟು</td><td>224</td><td>1103</td><td>1327</td></tr>
<tr><td>ಕ.ಕ.ರ.ಸಾ.ನಿಗಮ</td><td>ದಸರಾ</td><td>2</td><td>34</td><td>36</td></tr>
<tr><td></td><td>ದೀಪಾವಳಿ</td><td>12</td><td>73</td><td>85</td></tr>
<tr><td></td><td>ಗೌರಿ ಗಣೇಶ</td><td>5</td><td>37</td><td>42</td></tr>
<tr><td colspan="2">ಒಟ್ಟು</td><td>19</td><td>144</td><td>163</td></tr>
</table></td></tr>
<tr><td>ಈ)</td><td>ಹಳ್ಳಿಗಳಿಗೆ ಸಂಚರಿಸುವ ಬಸ್‌ಗಳು ಬಹಳ ಹಳೆಯ ಬಸ್‌ಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ನೂತನ ಬಸ್ ನೀಡುವ ಪ್ರಸ್ತಾವನೆ ಇದೆಯೇ; ಇದ್ದಲ್ಲಿ ಯಾವ ಕಾಲಮಿತಿಯೊಳಗೆ ನೀಡಲಾಗುವುದು;</td><td rowspan="2">ವಾ.ಕ.ರ.ಸಾ.ಸಂಸ್ಥೆ ಮತ್ತು ಕ.ಕ.ರ.ಸಾ.ನಿಗಮಗಳಲ್ಲಿ 2023-24ರ ಪೂರ್ವದ 04 ವರ್ಷಗಳಲ್ಲಿ ಹೊಸ ವಾಹನಗಳನ್ನು ಖರೀದಿಸಿರುವುದಿಲ್ಲ ಹಾಗೂ ಸಿಬ್ಬಂದಿ ನೇಮಕಾತಿ ಆಗಿರುವುದಿಲ್ಲ. ಇದರಿಂದ ಪ್ರಯಾಣಿಕರಿಗೆ ಬಸ್ಸುಗಳನ್ನು ಒದಗಿಸಲು ತೊಂದರೆಯಾಗಿತ್ತು.<br>ಆದರೆ, ಪ್ರಸ್ತುತ 2023-24 ಹಾಗೂ 2024-25ನೇ ಸಾಲಿನಲ್ಲಿ ವಾ.ಕ.ರ.ಸಾ.ಸಂಸ್ಥೆ ಮತ್ತು ಕ.ಕ.ರ.ಸಾ.ನಿಗಮಗಳಲ್ಲಿ ಖರೀದಿಸಲಾದ/ಖರೀದಿಸಲಾಗುವ ಬಸ್‌ಗಳ ವಿವರ ಕೆಳಗಿನಂತಿರುತ್ತದೆ:
<table>
<tr><th>ಸಂಸ್ಥೆ</th><th>ಸೇರ್ಪಡೆಯಾದ ಬಸ್‌ಗಳ ಸಂಖ್ಯೆ</th><th>ಸೇರ್ಪಡೆಗೊಳಿಸ-ಲಾಗುತ್ತಿರುವ ಬಸ್‌ಗಳ ಸಂಖ್ಯೆ</th></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>662</td><td>554</td></tr>
<tr><td>ಕ.ಕ.ರ.ಸಾ.ನಿಗಮ</td><td>1014</td><td>73</td></tr>
<tr><td>ಒಟ್ಟು</td><td>1676</td><td>627</td></tr>
</table>
ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:<br>ಸಂಸ್ಥೆಯಲ್ಲಿ 2000 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಅನುಮೋದನೆ ನೀಡಲಾಗಿದ್ದು, ಅದರಂತೆ,</td></tr>
<tr><td>ಉ)</td><td>ಹಳ್ಳಿಗಳಲ್ಲಿರುವ ಸಾರ್ವಜನಿಕರ ಹಿತದೃಷ್ಟಿಯಿಂದ ನೂತನ ಬಸ್ ನೀಡಿ ಸುಗಮ ಸಂಚಾರಕ್ಕೆ ಸರ್ಕಾರವು ಅನುಕೂಲ ಮಾಡುವುದೇ? (ವಿವರ ನೀಡುವುದು)</td></tr>
</table>

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | 1000 ಚಾಲನಾ ಹುದ್ದೆಯ ಮೂಲ ದಾಖಲಾತಿಯ ಪರಿಶೀಲನಾ ಕಾರ್ಯ ಪೂರ್ಣಗೊಳಿಸಲಾಗಿದೆ. ಸದರಿ ನೇಮಕಾತಿ ಪ್ರಕ್ರಿಯೆ ಮುಕ್ತಾಯಗೊಂಡ ನಂತರ ಉಳಿದ 1000 ಚಾಲನಾ ಸಿಬ್ಬಂದಿಗಳ ನೇಮಕಾತಿಗಾಗಿ ಜಾಹಿರಾತು ಹೊರಡಿಸಲಾಗುವುದು. ಅಲ್ಲದೇ ಚಾಲಕ-ಕಂ-ನಿರ್ವಾಹಕ ಹುದ್ದೆಯು ಒಳಗೊಂಡಂತೆ ಇತರೆ ಒಟ್ಟು 391 ವಿವಿಧ ವೃಂದಗಳಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ.<br><br>ಚಾಲನಾ ಸಿಬ್ಬಂದಿಗಳ ಕೊರತೆಯನ್ನು ನೀಗಿಸಲು ಹೊರಗುತ್ತಿಗೆ ಆಧಾರದ ಮೇಲೆ 400 ಚಾಲಕರನ್ನು ಪಡೆಯಲಾಗಿದೆ. ಇನ್ನೂ 500 ಚಾಲಕರನ್ನು ಗುತ್ತಿಗೆ ಆಧಾರದ ಮೇಲೆ ಪಡೆಯುವ ಪ್ರಕ್ರಿಯೆ ಜಾರಿಯಲ್ಲಿದೆ.<br><br>2024-25ನೇ ಸಾಲಿನ ಅಂತ್ಯಕ್ಕೆ 4745 ಅನುಸೂಚಿಗಳನ್ನು ಕಾರ್ಯಾಚರಿಸಲು ಯೋಜನೆ ರೂಪಿಸಲಾಗಿರುತ್ತದೆ.<br><br>**ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ**<br><br>ಪ್ರಸ್ತುತ 1583 ಚಾಲಕ ಹಾಗೂ ಚಾಲಕ-ಕಂ-ನಿರ್ವಾಹಕ ಹುದ್ದೆಗಳನ್ನು ನೇರ ನೇಮಕಾತಿ ಹಾಗೂ ಇತರೆ 121 ವಿವಿಧ ವೃಂದದ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ.<br><br>ಶಕ್ತಿ ಯೋಜನೆ ಪೂರ್ವಕ್ಕೆ ಹೋಲಿಸಿದಲ್ಲಿ ಪ್ರತಿ ದಿನ 603 ಹೆಚ್ಚಿನ ಅನುಸೂಚಿಗಳಿಂದ 4816 ಹೆಚ್ಚುವರಿ ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>ಮೇಲ್ಕಂಡಂತೆ ಬಸ್ ಸೇರ್ಪಡೆ ಮತ್ತು ಸಿಬ್ಬಂದಿ ನೇಮಕಾತಿ ನಂತರ ಆದ್ಯತೆ ಮೇರೆಗೆ ಹೊಸ ಬಸ್ಸುಗಳನ್ನು ಒದಗಿಸಲು ಕ್ರಮವಹಿಸಲಾಗುವುದು. |

ಸಂಖ್ಯೆ: ಟಿಡಿ 247 ಟಿಸಿಕ್ಯೂ 2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು

ಅನುಬಂಧ-1

ಶ್ರೀ ನಿರಾಣಿ ಹನುಮಂತಪ್ಪ ರುದ್ರಪ್ಪ, (ಪದವೀಧರ ಕ್ಷೇತ್ರದಿಂದ ಚುನಾಯಿತರಾದವರು ) ವಿಧಾನ ಪರಿಷತ್ ಸದಸ್ಯರು, ಇವರ **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ: 1011** ಕ್ಕೆ ಮಾಹಿತಿ.

ಬಾಗಲಕೋಟೆ ಜಿಲ್ಲೆಯಲ್ಲಿ ಒಟ್ಟು ಸಂಚಾರ ಮಾಡುವ ಬಸ್‌ಗಳ ಸಂಖ್ಯೆ, ನೂತನವಾಗಿ ಓಡಾಡುತ್ತಿರುವ ಬಸ್ ಗಳು, ದುರಸ್ಥಿಯಲ್ಲಿರುವ ಬಸ್‌ಗಳ ಸಂಖ್ಯೆಯ ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.(27.11.2024 ರಂದು ಇದ್ದಂತೆ)

| ತಾಲೂಕು(ಘಟಕ) | ಕಾರ್ಯ ನಿರ್ವಹಿಸುತ್ತಿರುವ ಬಸ್ಸುಗಳ ಸಂಖ್ಯೆ | ಹೊಸ ವಾಹನಗಳ ಸಂಖ್ಯೆ | ದುರಸ್ತಿಯಲ್ಲಿರುವ ಬಸ್‌ಗಳ ಸಂಖ್ಯೆ |
|---|---|---|---|
| ಬಾಗಲಕೋಟೆ | 131 | 14 | 02 |
| ಜಮಖಂಡಿ | 114 | 13 | 01 |
| ಬದಾಮಿ | 87 | 11 | 01 |
| ಇಲಕಲ್ | 103 | 12 | 01 |
| ಮುದೋಳ | 103 | 12 | 01 |
| ಬೀಳಗಿ | 71 | 10 | 00 |
| ಗುಳೇದಗುಡ್ಡ | 56 | 8 | 01 |
| ಹುನಗುಂದ | 65 | 8 | 01 |
| ಒಟ್ಟು | 730 | 88 | 08 |

ವ್ಯವಸ್ಥಾಪಕ ನಿರ್ದೇಶಕರು

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ. ಅನುಬಂಧ-೨

## ವಿಜಯಪುರ ವಿಭಾಗದ ವಾಹನಗಳ ವಿವರಗಳು

| ಘಟಕ | ಒಟ್ಟು ಬಸ್ಸುಗಳ ಸಂಖ್ಯೆ | ಘಟಕವಾರು ನೂತನವಾಗಿ ಓಡಾಡುವ ಬಸ್ಸುಗಳ ವಿವರ | ದುರಸ್ತಿಯಲ್ಲಿರುವ ಬಸ್ಸುಗಳ ಸಂಖ್ಯೆ | ದುರಸ್ತಿಗಾಗಿ ಇರುವ ಕಾರಣ |
|---|---|---|---|---|
| ವಿಜಯಪುರ ಘಟಕ-1 | 122 | 17 | 03 | ರಹದಾರಿ ನವೀಕರಣ/ಬೆಚ್ಚಿನ ಕವಚ ದುರಸ್ತಿ ಹಾಗೂ ರೀ-ಫರ್ಬಿಶಿಂಗ್ |
| ವಿಜಯಪುರ ಘಟಕ-2 | 86 | 17 | 02 | ರಹದಾರಿ ನವೀಕರಣ ಹಾಗೂ ಅಭಿಯಂತ್ರದ ದುರಸ್ತಿ |
| ವಿಜಯಪುರ ಘಟಕ-3 | 77 | 04 | 02 | ರಹದಾರಿ ನವೀಕರಣ |
| ಇಂಡಿ ಘಟಕ | 112 | 19 | 03 | ರಹದಾರಿ ನವೀಕರಣ ಹಾಗೂ ಅಪಘಾತ ದುರಸ್ತಿ |
| ಸಿಂದಗಿ ಘಟಕ | 107 | 19 | 01 | ಅಭಿಯಂತ್ರದ ದುರಸ್ತಿ |
| ಮುದ್ದೇಬಿಹಾಳ ಘಟಕ | 133 | 22 | 01 | ಅಪಘಾತ ದುರಸ್ತಿ |
| ತಾಳಿಕೋಟೆ ಘಟಕ | 93 | 16 | 03 | ಅಭಯಂತ್ರ ದುರಸ್ತಿ ಹಾಗೂ ಟೈರ್ ಅಳವಡಿಕೆ |
| ಬಸವನ ಬಾಗೇವಾಡಿ ಘಟಕ | 83 | 13 | 01 | ರಹದಾರಿ ನವೀಕರಣ ಹಾಗೂ ಬೆಚ್ಚಿನ ಕವಚ ದುರಸ್ತಿ |
| ವಿಭಾಗ | 813 | 127 | 15 | |

ಮುಖ್ಯ ಯಾಂತ್ರಿಕ ಅಭಿಯಂತರರು

Scanned with OKEN Scanner